# ಅಡುಗೆಮನೆಯಲ್ಲಿ ಲಾಕ್‌ಡೌನ್ ಬೆಳಕು

ಅಡುಗೆಮನೆ ಹೆಣ್ಣುಮಕ್ಕಳಿಗೆ ಸೇರಿದ್ದು ಎನ್ನುವ ಸಾಂಪ್ರದಾಯಿಕ ಗ್ರಹಿಕೆ ಬದಲಾಗುತ್ತಿದೆ. ಗಂಡಸರು ಭೀಮಸೇನ, ನಳ ಮಹಾರಾಜರ ಪರಂಪರೆಯನ್ನು ನೆನಪಿಸಿಕೊಳ್ಳುತ್ತಿದ್ದಾರೆ. ಮಕ್ಕಳು ಕೂಡ ಬಾಣಸಿಗರ ಪೋಷಾಕು ತೊಟ್ಟು ಸಂಭ್ರಮಿಸುತ್ತಿದ್ದಾರೆ. ತಿನ್ನುವುದನ್ನು ಬಿಟ್ಟರೆ ಅಡುಗೆಮನೆಯಲ್ಲಿ ಯಾವುದು ಎಲ್ಲಿದೆ ಎನ್ನುವುದನ್ನೂ ತಿಳಿಯದವರಿಗೆ, ‘ಯೂಟ್ಯೂಬ್’ ಗೆಳತಿ ಉಪ್ಪು–ಹುಳಿ–ಖಾರದ ಒಳಗುಟ್ಟುಗಳನ್ನು ಹೇಳಿಕೊಡುತ್ತಿದ್ದಾಳೆ. ತಿನ್ನುವುದರಿಂದ ಬಾಯಿರುಚಿ ನೀಗಿದರಷ್ಟೇ ಸಾಲದು, ದೇಹಕ್ಕೆ ಪೌಷ್ಟಿಕಾಂಶಗಳೂ ದೊರೆಯಬೇಕು ಎನ್ನುವ ಆರೋಗ್ಯದ ಕಾಳಜಿ ಮನೆಮಂದಿಯಲ್ಲಿ ಹೆಚ್ಚುತ್ತಿದೆ. ಈ ಬದಲಾವಣೆಗೆಲ್ಲ ಏನು ಕಾರಣ? ಮತ್ತೇನಿಲ್ಲ, ಕೊರೊನಾ! ‘ಅಡುಗೆಕೋಣೆಯೆನ್ನುವುದು ಹೆಣ್ಣಿಗೆ ಸೀಮಿತವಾದುದಲ್ಲ; ಅದು ಎಲ್ಲರಿಗೂ ಸೇರಿದ್ದು.’ ಇದು ಲಾಕ್‌ಡೌನ್ ಸಮಯದಲ್ಲಿ ಜನಸಾಮಾನ್ಯರಿಗೆ ಆಗಿರುವ ಜ್ಞಾನೋದಯಗಳಲ್ಲೊಂದು.

■ ಸುಮಾ ಬಿ.



**ನಳ-ಭೀಮಸೇನರ ಪೋಷಾಕು, ಮಕ್ಕಳು ಹಿಡಿದರು ಸೌಟು**